C.R.P.67

Form No.4 (Civil)
Deposition Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆಃ 186/2021**

**ಪ್ರಾಸಾ. 5 ಚಾಸಾ. 13**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಚಾಂದ್ ಪಾಷಾ |
| **ತಂದೆ ಹೆಸರು** | : | ನಬೀರ್ ರಸೂಲ್ |
| **ವಯಸ್ಸು** | : | 50 ವರ್ಷಗಳು |
| **ಉದ್ಯೋಗ** | : | ಆಯುರ್ವೇದಿಕ ವೈದ್ಯರು |
| **ವಾಸ** | : | ಸುಭಾಷ್ ನಗರ, ಬೆಂಗಳೂರು. |

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 08.07.2025**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ಸುಭಾಷ್ ನಗರದಲ್ಲಿ ಶಿಫಾ ಹೆಲ್ತ್ ಕೇರ್ ಎಂಬ ಕ್ಲಿನಿಕ್ ಇಟ್ಟುಕೊಂಡು 15 ವರ್ಷಗಳಿಂದ ವೈದ್ಯ ವೃತ್ತಿ ನಿರ್ವಹಿಸುತ್ತಿದ್ದೇನೆ.

2. ಚಾಸಾ-1 ಗೊತ್ತು. ಅವರು ನಮ್ಮ ಕ್ಲಿನಿಕ್ ಪಕ್ಕದಲ್ಲಿ 4-5 ವರ್ಷಗಳಿಂದ ವಾಸವಿದ್ದರು. ದಿನಾಂಕ 10.04.2021 ರಂದು ರಾತ್ರಿ 10.00 ಗಂಟೆಯ ಸಮಯದಲ್ಲಿ ಚಾಸಾ-1 ರವರು ನಮ್ಮ ಕ್ಲಿನಿಕ್ ಬಳಿ ಬಂದು ತನ್ನ ಹೆಂಡತಿ ಮಾತನಾಡುತ್ತಿಲ್ಲ, ಮನೆಯಲ್ಲಿ ಬಿದ್ದು ಬಿಟ್ಟಿದ್ದಾಳೆ ಎಂದು ಹೇಳಿದ್ದು, ಆಗ ನಾನು ಅವರು ಮನೆಗೆ ಹೋಗಿ ನೋಡಿರುತ್ತೇನೆ. ಚಾಸಾ-1 ರವರ ಪತ್ನಿ ಮನೆಯಲ್ಲಿ ಬಿದ್ದಿದ್ದು ಅವರ ಕುತ್ತಿಗೆಯಲ್ಲಿ ರಕ್ತ ಬರುತ್ತಿತ್ತು. ನಾನು ನೋಡಿದಾಗ ಅದು ಅಸಹಜ ಸಾವು ಎಂದು ಕಂಡು ಬಂದಿದ್ದು, ಚಾಸಾ-1 ರವರಿಗೆ ಪೊಲೀಸರಿಗೆ ದೂರು ನೀಡುವಂತೆ ತಿಳಿಸಿರುತ್ತೇನೆ. ಚಾಸಾ-1 ರವರ ಪತ್ನಿಯ ಭಾವಚಿತ್ರಗಳನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿ ನಿಶಾನೆ ಪಿ-2 ರಿಂದ 7 ಭಾವಚಿತ್ರಗಳಲ್ಲಿ ಕಂಡು ಬರುವ ಚಾಸಾ-1 ರವರ ಪತ್ನಿಯನ್ನು ನೋಡಿ ಗುರುತಿಸುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ-ಸವಾಲುಃ ಶ್ರೀ ಎ.ಎಸ್.ಎ. ವಕೀಲರಿಂದ ಆರೋಪಿಯ ಪರವಾಗಿಃ**

ಪಿರ್ಯಾದಿ ನನ್ನ ಬಳಿ ಬಂದಿಲ್ಲ, ನನ್ನನ್ನು ಆತನ ಮನೆಗೆ ಕರೆದಿರಲಿಲ್ಲ, ಆತನ ಪತ್ನಿಯ ಬಗ್ಗೆ ಹೇಳಿರಲಿಲ್ಲ, ನಾನು ಆತನ ಮನೆಗೆ ಹೋಗಿ ಆತನ ಪತ್ನಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ನನಗೆ ಆಕೆಯ ಸಾವಿನ ಬಗ್ಗೆ ಕಾರಣ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.